O.S.No.329/2015
DW -3

ದಿನಾಂಕ 21/08/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಎಸ್.ಆರ್.ಆರ್. ವಾದಿ ಪರ ವಕೀಲರಿಂದ**

2 ನೇ ಪ್ರತಿವಾದಿ ನನ್ನ ಸ್ನೇಹಿತರು ಎಂದರೆ ಸರಿ. ಚಂದ್ರಶೇಖರ್ ರವರ ತಂದೆ ಗಂಗಪ್ಪ ರವರನ್ನು ನಾನು ನೋಡಿರುತ್ತೇನೆ. ಸದರಿ ಗಂಗಪ್ಪ ರವರಿಗೆ ವಾದಿ ಮತ್ತು ಪ್ರತಿವಾದಿಗಳು ಮಕ್ಕಳು ಎಂದರೆ ಸರಿ . ಗಂಗಪ್ಪ ಮೂಲತಃ ವಾಸ ಸಿದ್ದನಹಳ್ಳಿ ಎಂದರೆ ಸರಿ. ನಾನು ಚಿಕ್ಕವಯಸ್ಸಿನಿಂದ ಗಂಗಪ್ಪ ರವರನ್ನು ನೋಡಿರುತ್ತೇನೆ ಎಂದರೆ ಸರಿ. ಸದರಿಯವರು ಯಾವುದೇ ಸರ್ಕಾರಿ ನೌಕರಿ , ಗುತ್ತಿಗೆದಾರರು ಅಥವಾ ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿ. ಗಂಗಪ್ಪ ಮತ್ತು ಅವರ ತಂದೆ ಮೂಲತಃ ವ್ಯವಸಾಯಸ್ಥರು ಎಂದರೆ ಸಾಕ್ಷಿ ವ್ಯವಸಾಯ ಮತ್ತು ಅಂಗಡಿ ಇಟ್ಟುಕೊಂಡಿದ್ದರು. ಸದರಿ ಅಂಗಡಿ ಹೆಸರು ಗೊತ್ತಿರುವುದಿಲ್ಲ. ಅಂಗಡಿ ನಡೆಸಲು ಯಾವುದೇ ಪಂಚಾಯಿತಿ ಪರವಾನಿಗೆ ಪಡೆದುಕೊಂಡಿರುವುದಿಲ್ಲ,

2. ಸದರಿ ಅಂಗಡಿಗೆ ಗಂಗಪ್ಪ ತೆರಿಗೆ ಕಟ್ಟುತ್ತಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಅಗಡಿಗೆ ಎಲ್ಲಿಂದ ಸಾಮಾನುಗಳನ್ನು ತರುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ-4/1 ಗಂಗಪ್ಪ ರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಗಂಗಪ್ಪ ರವರು ಉಳುಮೆ ಮಾಡುತ್ತಿದ್ದ ಸರ್ವೆ ನಂ-4/1 ರ ಜಮೀನಿನ ಚಕ್ಕುಬಂದಿ ಪೂ-ಗಂಗಾಧರಪ್ಪ ರವರ ಜಮೀನು, ಪ-ಗೋಪಾಲಕೃಷ್ಣ ರವರ ಜಮೀನು , ಉ-ಇದೇ ಸರ್ವೆ ನಂಬರ್ ಜಮೀನು ಮತ್ತು ದ-ಪುಟ್ಟಣ್ಣನ ಜಮೀನು ಎಂದರೆ ಸಾಕ್ಷಿ ಭಾಗ ಮಾಡಿಕೊಂಡಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ-4/1 ರ ಜಮೀನು ಬೀಳು ಇರುತ್ತದೆ.

3. ದಾವಾ ಐಟಂ ನಂ-2 ರಿಂದ 5 ಆಸ್ತಿಗಳನ್ನು ನಾನು ನೋಡಿರುತ್ತೇನೆ. ಸದರಿ ಆಸ್ತಿಗಳಲ್ಲಿ ಗಂಗಪ್ಪ ಇವರು ಉಳುಮೆ ಮಾಡುತ್ತಿದ್ದರು. ಸರ್ವೆ ನಂ- 4/1 ಊರಿನ ಪಕ್ಕ ಇದ್ದು ಅದು ಫಲವತ್ತಾದ ಜಮೀನು ಎಂದರೆ ಸಾಕ್ಷಿ ಉಳುಮೆ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಐಟಂ ನಂ-2 ರಿಂದ 5 ಆಸ್ತಿಗಳು ಮಳೆ ಆಶ್ರಿತ ಜಮೀನುಗಳು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಗಂಗಪ್ಪ ರವರು ಉಳುಮೆ ಮಾಡಿ ಬೆಳೆ ಇಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ-2 ರಿಂದ 5 ಜಮೀನುಗಳಲ್ಲಿ ಗಂಗಪ್ಪ ರವರು ಬೆಳೆ ಇಟ್ಟು ಕಟಾವು ಮಾಡುತ್ತಿದ್ದರು ಎಂದರೆ ಸರಿ. ದಾವಾ ಐಟಂ ನಂ-2 ರಿಂದ 5 ಆಸ್ತಿಗಳು ಗಂಗಪ್ಪ ರವರಿಗೆ ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಐಟಂ ನಂ-2 ರಿಂದ 5 ಆಸ್ತಿಗಳನ್ನು ನಾನು 25 ವರ್ಷಗಳಿಂದ ನೋಡುತ್ತಾ ಬಂದಿರುತ್ತೇನೆ.

4. ವಾದಿ ಮತ್ತು ಪ್ರತಿವಾದಿಗಳನ್ನು 30 ವರ್ಷಗಳಿಂದ ನೋಡುತ್ತಾ ಇರುತ್ತೇನೆ. ವಾದಿ ಗಂಗಪ್ಪನ ಮನೆಯಲ್ಲಿ ವಾಸ ಇದ್ದ ಎಂದರೆ ಸಾಕ್ಷಿ ಹಿಂದೂಪುರದಲ್ಲಿ ಹೋಟೆಲ್ ಇಟ್ಟುಕೊಂಡಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿಯವರು 25-30 ವರ್ಷಗಳಿಂದ ಹಿಂದೂಪುರದಲ್ಲಿ ಇದ್ದರು. ವಾದಿ ಹಿಂದೂಪುರಕ್ಕೆ ಹೋಗುವ ಪೂರ್ವದಲ್ಲಿ ಯಾರ ಜೊತೆ ವಾಸ ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ, 30 ವರ್ಷಗಳ ಹಿಂದೆ ಗಂಗಪ್ಪ ರವರ ಜೊತೆಯಲ್ಲಿ ಯಾರು ಯಾರು ವಾಸ ಇದ್ದು ಎಂದು ನನಗೆ ಹೇಳಲು ಆಗುವುದಿಲ್ಲ. ವಾದಿಯ ಮದುವೆಯನ್ನು ಗಂಗಪ್ಪ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯ ಮದುವೆ ಶಾಸ್ತ್ರವನ್ನು ಸಿದ್ದೇನಹಳ್ಳಿಯಲ್ಲಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯ ಹೆಂಡತಿಯನ್ನು ನಾನು ನೋಡಿರುತ್ತೇನೆ. ನಂಜಪ್ಪ ರವರ ಮದುವೆ ಗೌರೀಬಿದನೂರಿನಲ್ಲಿ ಆಗಿರುತ್ತದೆ. ನಂಜಪ್ಪ ರವರ ಹರಿಶಿನ ಶಾಸ್ತ್ರವನ್ನು ಸಿದ್ದೇನೆಹಳ್ಳಿಯಲ್ಲಿ ಮಾಡಿರುತ್ತಾರೆ ಎಂದರೆ ನನಗೆ ಗೂತ್ತಿರುವುದಿಲ್ಲ.

5. ವಾದಿ 1 ರಿಂದ 10 ನೇ ತರಗತಿಯನ್ನು ಪುರವಾರದಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ, ವಾದಿಗಳು ಮತ್ತು ಪ್ರತಿವಾದಿಗಳು ಎಲ್ಲಿ ಓದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ಐ.ಡಿ.ಹಳ್ಳಿಯಲ್ಲಿ 1968 ರಿಂದ 1989 ರವರೆಗೆ ವಾಸ ಇದ್ದೆ. ನಾನು 1990 ನೇ ಸಾಲಿನಲ್ಲಿ ಸಿದ್ದನಹಳ್ಳಿಗೆ ಬಂದಿರುತ್ತೇನೆ. ಮಧ್ಯದಲ್ಲಿ ಸಿದ್ದೇನಹಳ್ಳಿಯಲ್ಲಿ ಯಾರು ಯಾರು ಏನು ಕೆಲಸಗಳು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಗಂಗಪ್ಪ ರವರು ವಯಸ್ಸಾಗಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗಂಗಪ್ಪ ರವರು ತೀರಿಕೊಂಡ ಕಾಲಕ್ಕೆ ಅವರಿಗೆ ಅಂದಾಜು 75-80 ವರ್ಷ ವಯಸ್ಸು ಆಗಿತ್ತು. ಸದರಿಯವರು ತೀರಿಕೊಳ್ಳುವ 10 ವರ್ಷ ಪೂರ್ವದಲ್ಲಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಗಂಗಪ್ಪ ರವರು 1996 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ ಹಾಗಾಗಿ ನಾನು ಅವರು ಏನು ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಗಂಗಪ್ಪ ರವರು ಹೋಟೆಲ್ , ಪೆಟ್ಟಿ ಶಾಪ್ ಮತ್ತು ಪಚ್ಚಮಾರು ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

6. ಗಂಗಪ್ಪ ರವರು ದಾವಾ ಆಸ್ತಿಯ ಒಟ್ಟು ಕುಟುಂಬದ ಆದಾಯದಿಂದ ಕೊಂಡುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗಂಗಪ್ಪ ರವರಿಗ ಮಾಸಿಕ ಎಷ್ಟು ಆದಾಯ ಇತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ. ಗಂಗಪ್ಪ ರವರು ಹುಣಸೆ ಹಣ್ಣು, ಕಡಲೆಕಾಯಿಯನ್ನು ಯಾರ ಕಡೆಯಿಂದ ತೆಗೆದುಕೊಳ್ಳುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವ್ಯಾಪಾರದಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಹುಣಸೆ ಹಣ್ಣು ಮತ್ತು ಕಡಲೆಕಾಯಿಯನ್ನು ಯಾವ ಮಂಡಿಗೆ ಹಾಕುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

7. ವಾದಿ ಮತ್ತು ಪ್ರತಿವಾದಿಗಳು ಸಿದ್ದನಹಳ್ಳಿಯಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ 30 ವರ್ಷಗಳ ಇಚೀನ ವ್ಯವಹಾರ ಗೊತ್ತು ಎಂದು ಉತ್ತರಿಸಿರುತ್ತಾರೆ. 30 ವರ್ಷಗಳ ಪೂರ್ವದಲ್ಲಿ ಗಂಗಪ್ಪ ರವರ ಕುಟುಂಬದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಗಂಗಪ್ಪ ರವರು ಮಧುಗಿರಿಯ ಹಳೇಕೋರ್ಟು ಹತ್ತಿರ ವಿಲ್ ಮಾಡಿರುತ್ತಾರೆ, ವಿಲ್ ಬರೆದ ದಿನಾಂಕ ನನಗೆ ಗೊತ್ತಿರುವುದಿಲ್ಲ. ನಾನು ಗಂಪ್ಪನ ಜೊತೆ 11-30 ಕ್ಕೆ ಬಂದಿರುತ್ತೇವೆ. ನಾವು ಬಂದ ನಂತರ ಸಿದ್ದಪ್ಪ ರವರು ಬಂದಿರುತ್ತಾರೆ. ಸೋಮಶೇಖರ್ ರವರ ಪರಿಚಯ ಇರುತ್ತದೆ. ಅವರು ನಮ್ಮ ಮನೆಯಿಂದ 100 ಮೀಟರ್ ದೂರದಲ್ಲಿ ಇರುತ್ತಾರೆ. ಗಂಗಪ್ಪ ರವರು 4 ಪಹಣಿಗಳನ್ನು ತೆಗೆದುಕೊಂಡು ಬಂದಿದ್ದರು. ವಿಲ್ ನ್ನು ಟೈಪ್ ಮಾಡಿಸಲಾಗಿರುತ್ತದೆ, ಯಾರ ಬಳಿ ಟೈಪ್ ಮಾಡಿಸಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಟೈಪ್ ನ್ನು ಬಾಂಡ್ ಪೇಪರ್ ಮೇಲೆ ಮಾಡಲಾಗಿರುತ್ತದೆ , ಸದರಿ ಬಾಂಡ್ ಪೇಪರನ್ನು ಯಾರು ತಂದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ ಬಾಂಡ್ ಪೇಪರ್ ಮೌಲ್ಯ ನನಗೆ ಗೊತ್ತಿರುವುದಿಲ್ಲ ಮತ್ತು ಎಷ್ಟು ಹಾಳೆ ಇದೆ ಎಂದು ನನಗೆ ಗೊತ್ತಿರುವುದಿಲ್ಲ.

8. ನನ್ನ ಮುಂದೆ ಟೈಪ್ ಮಾಡದೇ ಇರುವ ಕಾರಣ ಅದರಲ್ಲಿ ಏನು ಬರವಣಿ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ವಿಲ್ ಗೆ ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ವಿಲ್ ಗೆ ಗಂಗಪ್ಪ ರವರು ಸಹಿ ಮಾಡುವಂತೆ ಹೇಳಿರುತ್ತಾರೆ. ನಾನು ಸಹಿ ಮಾಡಿದ ನಂತರ ಸಿದ್ದಪ್ಪ ರವರು ಸಹಿ ಮಾಡಿರುತ್ತಾರೆ. ಸದರಿ ವಿಲ್ ಪತ್ರಕ್ಕೆ ನಮ್ಮನ್ನು ಬಿಟ್ಟು ಬೇರೆ ಯಾರು ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ ವಿಲ್ ನಲ್ಲಿ ಚಕ್ಕುಬಂದಿ ಮತ್ತು ಯಾವ ಸರ್ವೆ ನಂಬರ್ ನಮೂದಿಸಿರುತ್ತಾರೆ ಎಂದು ನನಗೆ ಗೊತ್ತಿರುದಿಲ್ಲ. ವಿಲ್ ನ್ನು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

9. ಸದರಿ ವಿಲ್ ಪತ್ರಕ್ಕೆ ನಾನು ಮತ್ತು ಸಿದ್ದಪ್ಪ ಎಷ್ಟು ಕಡೆ ಸಹಿ ಮಾಡಿದ್ದೇನೆಂದು ನನಗೆ ಹೇಳಲು ಆಗುವುದಿಲ್ಲ ಮರೆತು ಹೋಗಿರುತ್ತೇನೆ. ಗಂಗಪ್ಪ ರವರು ಒಂದು ಕಡೆ ನನ್ನ ಮುಂದೆ ಸಹಿ ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಗಂಗಪ್ಪ ರವರು ಯಾವುದೇ ವಿಲ್ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಗಂಗಪ್ಪ ರವರಿಗೆ ವಯಸ್ಸಾದ ಕಾರಣ ಅವರಿಗೆ ಬುದ್ದಿ ಜ್ಞಾನ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಗಂಗಪ್ಪ ರವರಿಗೆ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ, ನಾನು, ಸಾಕ್ಷಿದಾರರು, ಪತ್ರಬರಹಗಾರರು ಮತ್ತು ಮಲ್ಲಿಕಾರ್ಜುನ ಸೇರಿಕೊಂಡು ಸುಳ್ಳು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಿಲ್ ಪತ್ರವನ್ನು ಈ ದಾವೆ ಹೂಡಿದ ನಂತರ ಬೆಂಗಳೂರಿನಿಂದ ತಂದು ಹಿಂದಿನ ದಿನಾಂಕ ನಮೂದಿಸಿ ಸದರಿ ವಿಲ್ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಧುಗಿರಿಯಲ್ಲಿ 4 ಪತ್ರಬರಹಗಾರರು ಅಂಗಡಿಗಳು ಇದ್ದವು ಎಂದರೆ ಸರಿ.

10. ಸದರಿ ಬಾಂಡ್ ಪೇಪರನ್ನು ನ್ಯಾಯಾಲಯದ ಬಳಿ ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ನಿಪಿ-5 ಸ್ಟಾಂಪ್ ಪೇಪರನ್ನು ಬೆಂಗಳೂರಿನಿಂದ ತಂದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-5 ರಲ್ಲಿ ಎಷ್ಟು ಕಡೆ ತಿದ್ದುಪಡಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ವಿಲ್ ಪತ್ರದಲ್ಲಿ ಷರಾ ಬರೆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-5 ಕ್ಕೆ ಗಂಗಪ್ಪ ರವರು ಸಹಿ ಮಾಡಿರುವುದಿಲ್ಲ ಹಾಗೂ ಸದರಿ ಸಹಿ ಗಂಗಪ್ಪ ನವರದು ಇರುವುದಿಲ್ಲ ಎಂದರೆ ಸರಿಯಲ್ಲ. ಹಳೇ ಕ್ರಯ ಪತ್ರದಲ್ಲಿರುವ ಸಹಿಗಳನ್ನು ನೋಡಿಕೊಂಡು ನಿಪಿ-5 ಕ್ಕೆ ಗಂಗಪ್ಪನ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

11. ಗಂಗಪ್ಪ ರವರು ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಗಂಗಪ್ಪ ರವರು ವಿಲ್ ಮಾಡಿದ ನಂತರ ಖಾತೆ ಪಹಣಿ ಮಾಡಿಸಿಕೊಂಡಿರುವ ಬಗ್ಗೆ ನಾನು ಪ್ರತಿವಾದಿಯರನ್ನು ಕೇಳಿರುವುದಿಲ್ಲ. ಗಂಗಪ್ಪ ತೀರಿಕೊಂಡು ಅವರ ಕುಟುಂಬದ ಆಸ್ತಿಗಳನ್ನು ಪೌವತಿ ವಾರಸು ಮೇರೆಗೆ ಗಂಗಪ್ಪ ರವರ ಹೆಂಡತಿ ಹೆಸರಿಗೆ ಖಾತೆ ಪಹಣಿ ಆಗಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗಂಡು ಮಕ್ಕಳ ಹೇಳಿಕೆ ಮತ್ತು ಒಪ್ಪಿಗೆ ಮೇರೆಗೆ ನಂಜಮ್ಮ ರವರ ಹೆಸರಿಗೆ ಎಂ.ಆರ್ ಸಂಖೆ-6/1996-97 ರಂತೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗಂಗಪ್ಪ ರವರಿಗ 3 ಜನ ಮಕ್ಕಳ ಮೇಲೆ ಸಮನಾದ ಪ್ರೀತಿ ಎಂದರೆ ಸಾಕ್ಷಿ ನಾನು ಗಮನಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ